ಒತ್ತು ನೀಡಲಿದೆ' ಎಂದರು.

## ಅದಮ್ಯ ಚೇತನ ಸೇವಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಟಿ.ವಿ. ರಾಮಚಂದ್ರ

# ಪ್ಲಾಸ್ಟಿಕ್ ಬಾಟಲಿ ನೀರು ಕುಡಿದರೆ ಕ್ಯಾನ್ಸರ್ ನಿಶ್ಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಕೆರೆಗಳು ಸಾರಜನಕ, ರಂಜಕದ ಕೇಂದ್ರವಾಗಿವೆ. ಮನೆಗಳಲ್ಲಿಯೇ ನೀರಿನ ಸಂಸ್ಕರಣೆ ಮಾಡಿದರೆ ಕೆರೆಗಳ ಮಾಲಿನ್ಯ ಕಡಿಮೆಯಾಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ.ವಿ. ರಾಮಚಂದ್ರ ಹೇಳಿದರು.

ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಅದಮ್ಯ ಚೇತನ ಸೇವಾ ಉತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.



ರಾಷ್ಟ್ರೋತ್ಥಾನ ಶಾಲೆ ವಿದ್ಯಾರ್ಥಿಗಳು ಬೇಳೆಕಾಳುಗಳ ಕುರಿತು ರೂಪಿಸಿದ್ದ ಮಾದರಿ ಬಗ್ಗೆ ಕೇಂದ್ರ ಸಚಿವ ಅನಂತ್ ಕುಮಾರ್ ಅವರು ಪ್ರಹ್ಲಾದ ಜೋಷಿ, ಎನ್. ಕುಮಾರ್ ಅವರಿಗೆ ವಿವರಿಸಿದರು. ತೇಜಸ್ವಿನಿ ಅನಂತಕುಮಾರ್ ಇದ್ದರು
—ಪ್ರಜಾವಾಣಿ ಚಿತ್ರ

'ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರು ಕುಡಿಯುವುದು ಬಹಳ ಅಪಾಯಕಾರಿ. ವ್ಯಕ್ತಿ ಸಾವಿರ ಸಲ ಪ್ಲಾಸ್ಟಿಕ್ ಬಾಟಲಿಯ ನೀರು ಕುಡಿದರೆ ಕ್ಯಾನ್ಸರ್ ಕಟ್ಟಿಟ್ಟ ಬುತ್ತಿ. ಹಾಗಾಗಿ ಪ್ಲಾಸ್ಟಿಕ್ ಬಳಕೆಯನ್ನು ಜನ ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಅಲ್ಲದೆ, ಜನರು ನೀರಿನ ಮಹತ್ವವನ್ನು ಅರಿಯಬೇಕು. ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ದ್ವಿದಳ ಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದು ತಿಳಿಸಿದರು.

ಹಸಿರು ನೋಟ ಉದ್ದೇಶದ ಬಗ್ಗೆ ಪ್ರೊ. ಸೌಮ್ಯ ಪ್ರಸಾದ್ ಮಾತನಾಡಿ, 'ನಗರದ ಶೇ 90ರಷ್ಟು ಹಸುಗಳ ಹೊಟ್ಟೆಯಲ್ಲಿ ಪ್ಲಾಸ್ಟಿಕ್ ಸಂಗ್ರಹವಾಗಿದೆ. ಇದರಿಂದ ಹಾಲು ನೀಡುವ ಪ್ರಮಾಣ ಕಡಿಮೆಯಾಗುತ್ತದೆ. ಹಸುಗಳ ಆಯಸ್ಸು 10ರಿಂದ 15 ವರ್ಷ ಕುಗ್ಗುತ್ತದೆ. ಹಸುಗಳು ಮಾತ್ರವಲ್ಲ, ನಮ್ಮ ವನ್ಯ ಜೀವಿಗಳು ಈ ಸಮಸ್ಯೆಯಿಂದ ತೊಂದರೆ ಪಡುತ್ತಿವೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಮಾತನಾಡಿ, 'ಪರಿಸರಉಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಜನಸಂಖ್ಯೆ ಹೆಚ್ಚಿರುವುದರಿಂದ ಸಮರ್ಪಕ ಕೆಲಸ ಮಾಡಲು ಸಾಧ್ಯವಾಗಿಲ್ಲ. ಸಂಘ ಸಂಸ್ಥೆಗಳು ಬಹಳ ವ್ಯವಸ್ಥಿತವಾಗಿ ಈ ಕೆಲಸಗಳನ್ನು ಮಾಡುತ್ತಿವೆ' ಎಂದರು.

ಕೇಂದ್ರ ಸಚಿವ ಅನಂತ ಕುಮಾರ್ ಮಾತನಾಡಿ, 'ಪ್ರಕೃತಿಗೆ ಮಾರಕವಾಗಿರುವ ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕು. ಆಗ ನಮ್ಮ ನೀರು ಸ್ವಚ್ಛ ಆಗುತ್ತದೆ. ಪ್ರಕೃತಿ ಕಂಗೊಳಿಸುತ್ತದೆ. ಭೂಮಿ ಬಹಳ ವರ್ಷ ಬದುಕುತ್ತದೆ. ಈ ಸಮಸ್ಯೆಗಳಿಂದ ಉತ್ತರ ಹುಡುಕುವ ಕಡೆಗೆ ಹೋಗುವುದಕ್ಕಾಗಿಯೇ ಅದಮ್ಯ ಚೇತನ ಉತ್ಸವ ರೂಪಗೊಂಡಿದೆ' ಎಂದರು.

ಅದಮ್ಯ ಚೇತನ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ತೇಜಸ್ವಿನಿ ಅನಂತ ಕುಮಾರ್ ಮಾತನಾಡಿ, 'ನಾಲ್ಕು ದಿನಗಳ ಈ ಮೇಳದಲ್ಲಿ ಪ್ಲಾಸ್ಟಿಕ್ ಮುಕ್ತವಾಗಿಡಬೇಕೆಂದು ಯೋಚಿಸಿದ್ದೆವು. ಆದರೆ, ಎರಡು ದಿನ ಮಾತ್ರ ನಮ್ಮ ಉತ್ಸವವನ್ನು ಪ್ಲಾಸ್ಟಿಕ್ ಕಸ ಮುಕ್ತವಾಗಿಸಲು ಸಾಧ್ಯವಾಯಿತು' ಎಂದರು.

## ಅವರೆಕಾಯಿ ಮೇಳ